ಆ.	ಹಂಚಿಕೆಯಾದ ನೀರಿನಿಂದ ಯಾವ ತಾಲೂಕುಗಳು, ಎಷ್ಟು ಎಕರೆ ನೀರಾವರಿ ಸೌಲಭ್ಯಕ್ಕೆ ಒಳಪಟ್ಟಿವೆ?	ಎಡಭಾಗಕ್ಕೆ 2 ಮುಂಡರಗಿ 32982 ಎಕರೆ 3 ಕೊಪ್ಪಳ 12390 ಎಕರೆ 8.44 ಟಿ.ಎಂ.ಸಿ. 4 ಗದಗ 39073 ಎಕರೆ 2 ಒಟ್ಟು 120236 ಎಕರೆ 12.03 ಟಿ.ಎಂ.ಸಿ.
ಇ.	ಕೊಪ್ಪಳ ತಾಲ್ಲೂಕಿನಲ್ಲಿ ನಿಗದಿ ಪಡಿಸಿದ ನೀರಾವರಿಯ ಅಚ್ಚು ಕಟ್ಟು ಪ್ರದೇಶಗಳೆಷ್ಟು?	ಸಿಂಗಟಾಲೂರು ಏತ ನೀರಾವರಿ ಯೋಜನೆಯಡಿ ಕೊಪ್ಪಳ ತಾಲ್ಲೂಕಿನ ನಿಗದಿಪಡಿಸಿದ ನೀರಾವರಿ ಅಚ್ಚುಕಟ್ಟು ಪ್ರದೇಶ 12,390 ಎಕರೆ ಇರುತ್ತದೆ.
ಈ.	ಸ್ಕೀಂ 'ಬಿ' ಯೋಜನೆಯಲ್ಲಿ ಕೊಪ್ಪಳ ಜಿಲ್ಲೆಗೆ ನಿಗದಿಪಡಿಸಿದ ನೀರಿನ ಪ್ರಮಾಣ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು)	ಕೊಪ್ಪಳ ಏತ ನೀರಾವರಿ ಯೋಜನೆಯು ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಂ-ಬಿರಡಿಯಲ್ಲಿ ಒಂದು ಉಪ ಯೋಜನೆಯಾಗಿರುತ್ತದೆ. ಸದರಿ ಯೋಜನೆಗೆ ತಾತ್ಕಾಲಿಕವಾಗಿ ನಿಗದಿಪಡಿಸಿದ ನೀರಿನ ಪ್ರಮಾಣ 11.565 ಟಿ.ಎಂ.ಸಿ. ಆಗಿರುತ್ತದೆ. ಇದರಿಂದ ಕೊಪ್ಪಳ ಜಿಲ್ಲೆಯ ಈ ಕೆಳಕಂಡ ಮೂರು ತಾಲ್ಲೂಕುಗಳಿಗೆ ನೀರನ್ನು ಒದಗಿಸಲು ಉದ್ದೇಶವಿದೆ. 1. ಕುಷ್ಟಗಿ - 8,545 ಹೆ. 2. ಕೊಪ್ಪಳ - 7,330 ಹೆ. 3. ಯಲಬುರ್ಗ - 16,848 ಹೆ.
ಉ.	ಸ್ಕೀಂ 'ಬಿ' ಯೋಜನೆಯಲ್ಲಿ ಏತ ನೀರಾವರಿ ಯೋಜನೆಗಾಗಿ ಜಿಲ್ಲೆಯ ಎಷ್ಟು ಗ್ರಾಮಗಳನ್ನು ತೆಗೆದುಕೊಳ್ಳಲಾಗಿದೆ. ಈ ಗ್ರಾಮಗಳಿಗೆ ಎಷ್ಟು ಟಿ.ಎಂ.ಸಿ ನೀರನ್ನು ಬಳಸಲಾಗುತ್ತಿದೆ? (ವಿವರಗಳನ್ನು ನೀಡುವುದು)	ಸದರಿ ಯೋಜನೆಯು ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಂ-ಬಿ ರಡಿಯಲ್ಲಿ ಪ್ರಸ್ತಾವನೆಯಾಗಿರುತ್ತದೆ. ಸ್ಕೀಂ-ಬಿ ರಡಿ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ಕೃಷ್ಣಾ ನ್ಯಾಯಾಧಿಕರಣ ರಚನೆಗೊಂಡಿದ್ದು, ನ್ಯಾಯಾಧಿಕರಣದ ಕಲಾಪಗಳು ಪ್ರಗತಿಯಲ್ಲಿವೆ. ನ್ಯಾಯಾಧಿಕರಣದ ಅಂತಿಮ ತೀರ್ಪು ಬಂದ ನಂತರ ತನಿಖೆ ಮತ್ತು ಸರ್ವೆ ಕಾರ್ಯ ಕೈಗೊಂಡು ಯೋಜನೆಯನ್ನು ಅನುಷ್ಠಾನಗೊಳಿಸ ಲಾಗುವುದು. ಹೀಗಾಗಿ ಎಷ್ಟು ಗ್ರಾಮಗಳು ನೀರಾವರಿಗೆ ಒಳಪಡಲಿವೆ ಎಂಬುವುದು ಸಧ್ಯಕ್ಕೆ ತಿಳಿದುಬರುವುದಿಲ್ಲ.
ಊ.	ಯೋಜನೆಯನ್ನು ಸರ್ಕಾರ ಯಾವಾಗ ಪ್ರಾರಂಭಿಸುವುದು?	

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 01 : (21)

ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಎಚ್. ಸಿ.

ಉತ್ತರಿಸುವ ಸಚಿವರು : ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ ಯೋಜನೆ ಹಾಗೂ ಸಾಂಖ್ಯಿಕ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರಗಳು
ಅ.	ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿರುವ ವೈ.ಜಿ.ಗುಡ್ಡ ಜಲಾಶಯ ನಿರ್ಮಾಣದ ಕಾರ್ಯವನ್ನು ಯಾವಾಗ ಪ್ರಾರಂಭ ಮಾಡಲಾಯಿತು?	ಕಾಮಗಾರಿಯನ್ನು 1988-89ನೇ ಸಾಲಿನಲ್ಲಿ 435.00ಲಕ್ಷ ರೂ.ಗಳ ಅಂದಾಜು ಮೊತ್ತದೊಂದಿಗೆ ಪ್ರಾರಂಭಿಸಲಾಗಿದೆ.
ಆ.	ಜಲಾಶಯ ನಿರ್ಮಾಣದಲ್ಲಿ ಸರ್ಕಾರ ಕೈಗೊಂಡಿರುವ ಕಾಮಗಾರಿಗಳ ರೂಪುರೇಶೆಗಳೇನು? (ವಿವರ ನೀಡುವುದು)	ಈ ಕಾಮಗಾರಿಯು ಕೆಳಕಂಡ ಕೆಲಸಗಳನ್ನು ಒಳಗೊಂಡಿದೆ. 1. ಕೆರೆ ಏರಿ (ಮಣ್ಣಿನ ಏರಿ) - 375 ಮೀ. 2. ಕೋಡಿ (ಕಾಂಕ್ರೀಟ್ ಗೋಡೆ) - 60 ಮೀ. 3. ಬಲದಂಡೆ ನಾಲೆ ಉದ್ದ 5.52 ಕಿ. ಮೀ. 4. ಎಡದಂಡೆ ನಾಲೆ ಉದ್ದ 14.52 ಕಿ. ಮೀ. ಈ ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯ 2.34 ದಶಲಕ್ಷ ಘನ ಮೀ. ಬಲದಂಡೆ ನಾಲೆಯಿಂದ 90 ಹೆಕ್ಟೇರ್ ಹಾಗೂ ಎಡದಂಡೆ ನಾಲೆಯಿಂದ 467 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಿದೆ.
ಇ.	ಈ ಎಲ್ಲಾ ಕಾಮಗಾರಿಗಳ ಕೆಲಸ ಸಂಪೂರ್ಣವಾಗಿ ಮುಗಿದಿದೆಯೇ?	ಇಲ್ಲ. ಬಲದಂಡೆ ಕಾಲುವೆ 5.52 ಕಿ.ಮೀ. ಪೂರ್ಣಗೊಂಡಿದೆ ಮತ್ತು ಎಡದಂಡೆ ನಾಲೆಯ ಕೆಲಸ 0.00 ಕಿ.ಮೀ. ಇಂದ 14.52 ಕಿ.ಮೀ. ವರೆಗೆ ಕಾಲುವೆ ಆಗೆತ, ಸಿ.ಡಿ. ಕಾಮಗಾರಿಗಳು ಪ್ರಗತಿಯಲ್ಲಿವೆ.
ಈ.	ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?	2009ನೆ ಮಾರ್ಚ್ ತಿಂಗಳಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 04 : (26)

ಸದಸ್ಯರ ಹೆಸರು : ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ)

ಉತ್ತರಿಸುವ ಸಚಿವರು : ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಮಾನ್ಯ ಜವಳಿ ಮತ್ತು ಯುವಜನ ಸೇವಾ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರಗಳು
ಅ.	ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಯುವಜನ ಸೇವಾ ಚಟುವಟಿಕೆಗಳನ್ನು ಪೋತ್ಸಾಹಿಸಲು ಇಲಾಖೆಯಿಂದ ನೇಮಿಸಲ್ಪಟ್ಟ ನೌಕರರ ವಿವರ ನೀಡುವುದು?	ಜಿಲ್ಲಾ ಮಟ್ಟದಲ್ಲಿ ಯುವಜನ ಸೇವಾ ಚಟುವಟಿಕೆಗಳನ್ನು ಪೋತ್ಸಾಹಿಸಲು ಇಲಾಖೆಯಿಂದ 29 ನೌಕರರನ್ನು ನೇಮಿಸಲ್ಪಡಲಾಗಿದೆ. ತಾಲ್ಲೂಕು ಮಟ್ಟದಲ್ಲಿ ಯಾರು ಇರುವುದಿಲ್ಲ, ಇದರೊಂದಿಗೆ ಅನುಬಂಧ-1 ರಲ್ಲಿ ನೌಕರರ ವಿವರಗಳನ್ನು ಲಗತ್ತಿಸಿದೆ.
ಆ.	ಜಿಲ್ಲೆ ಹಾಗೂ ತಾಲ್ಲೂಕು ಮತ್ತು ರಾಜ್ಯದಲ್ಲಿ ಯುವಜನ ಸೇವಾ ಚಟುವಟಿಕೆಗಳಿಗೆ ಒದಗಿಸಲಾದ ಅನುದಾನವೆಷ್ಟು?	2008-09ನೇ ಸಾಲಿಗೆ ರಾಜ್ಯ ಹಾಗೂ ಜಿಲ್ಲಾ ವಲಯ ಆಯವ್ಯಯದಡಿ ಒದಗಿಸಿದ ಹಣದ ವಿವರ ಕೆಳಕಂಡಂತಿದೆ. ರೂ.ಲಕ್ಷಗಳಲ್ಲಿ ಯೋಜನೆ / ಯೋಜನೇತರ / ಒಟ್ಟು ರಾಜ್ಯ ವಲಯ 4366.25 722.06 5088.31 ಜಿಲ್ಲಾ ವಲಯ 782.37 300.19 1082.56 ಒಟ್ಟು 5148.62 1022.25 6170.87 ರಾಜ್ಯ ವಲಯದಲ್ಲಿ ಒದಗಿಸಿರುವ ಹಣವನ್ನು ತಾಲ್ಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೆ ನಡೆಸುವ ಕಾರ್ಯಕ್ರಮಗಳಿಗೆ ಹಾಗೂ ತಾಲ್ಲೂರು ಕ್ರೀಡಾಂಗಣಗಳ ನಿರ್ಮಾಣಕ್ಕೆ ಬಳಸಿಕೊಳ್ಳಲಾಗುವುದು.
ಇ.	ಉಡುಪಿ ಜಿಲ್ಲೆಯಲ್ಲಿ ಇರುವ ಕ್ರೀಡಾಂಗಣಗಳು ಯಾವುವು? ಅವುಗಳ ಉಸ್ತುವಾರಿಯನ್ನು ನೋಡಿಕೊಳ್ಳುವ ಜವಾಬ್ದಾರಿ	ಉಡುಪಿ ಜಿಲ್ಲೆಯಲ್ಲಿ ಜರುಗುವ ಕ್ರೀಡಾಂಗಣಗಳು ಮೂರು. ಅವುಗಳ ವಿವರ ಈ ಕೆಳಗೆ ನೀಡಲಾಗಿದೆ. ಅ. ಉಡುಪಿ ಜಿಲ್ಲಾ ಕ್ರೀಡಾಂಗಣ.

	ಯೊಂದಗಿ ಸೇರಿದೆ. ಇವುಗಳಿಗೆ ಒದಗಿಸಲಾದ ಅನುದಾನ ಎಷ್ಟು?	**ಆ. ಕಾರ್ಕಳ ತಾಲ್ಲೂಕು ಕ್ರೀಡಾಂಗಣ.** **ಇ. ಕುಂದಾಪುರ ತಾಲ್ಲೂಕು ಕ್ರೀಡಾಂಗಣ.** ಜಿಲ್ಲಾ ಕ್ರೀಡಾಂಗಣ ಉಸ್ತುವಾರಿಯನ್ನು ಜಿಲ್ಲಾ ಕ್ರೀಡಾಂಗಣ ಸಮಿತಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾಯನಿರ್ವಹಣಾಧಿಕಾರಿಗಳ ಮೂಲಕ ನೋಡಿಕೊಳ್ಳುವ ಜವಾಬ್ದಾರಿಯೂ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಉಡುಪಿ ಜಿಲ್ಲೆಯ ಸಹಾಯಕ ನಿರ್ದೇಶಕರಿಗೆ ಸೇರಿದೆ. ತಾಲ್ಲೂಕು ಕ್ರೀಡಾಂಗಣಗಳ ಉಸ್ತುವಾರಿಯನ್ನು ತಾಲ್ಲೂಕು ಕ್ರೀಡಾಂಗಣದ ಸಮಿತಿ ಅಧ್ಯಕ್ಷರಾದ ಉಪವಿಭಾಗಾಧಿಕಿರಾಗಳ ಮೂಲಕ ನೋಡಿಕೊಳ್ಳುವ ಜವಾಬ್ದಾರಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಜಿಲ್ಲೆಯ ಸಹಾಯಕ ನಿರ್ದೇಶಕರಿಗೆ ಸೇರಿದೆ. ಜಿಲ್ಲಾ ಕ್ರೀಡಾಂಗಣ ನಿರ್ಮಾಣಕ್ಕೆ ರೂ.2.22 ಕೋಟಿ ಅನುದಾನ ಒದಗಿಸಿದೆ. ಕಾರ್ಕಳ ತಾಲ್ಲೂಕು ನಿರ್ಮಾಣಕ್ಕೆ ರೂ.32.00 ಲಕ್ಷ ಅನುದಾನ ಒದಗಿಸಿದೆ. ಪ್ರಸ್ತುತ ವಷದಲ್ಲಿ ಜಿಲ್ಲಾ ಪಂಚಾಯತ್‌ನಿಂದ ಕಾರ್ಕಳ ತಾಲ್ಲೂಕು ಕ್ರೀಡಾಂಗಣ ಉಸ್ತುವಾರಿ ನಿರ್ವಹಣೆಗಾಗಿ 2008-09ನೇ ಸಾಲಿನಲ್ಲಿ ರೂ. 2.00ಲಕ್ಷ ಅನುದಾನ ನಿಗದಿಪಡಿಸಿದೆ. ಕುಂದಾಪುರ ತಾಲ್ಲೂಕು ಕ್ರೀಡಾಂಗಣ ನಿರ್ಮಾಣಕ್ಕಾಗಿ 12ನೇ ಹಣಕಾಸು ಧನ ಸಹಾಯದಡಿ 2006-07ನೇ ಸಾಲಿನಲ್ಲಿ ರೂ. 26.00ಲಕ್ಷಗಳನ್ನು ಒದಗಿಸಿದೆ. ಉಸ್ತುವಾರಿ / ನಿರ್ವಹಣೆಗಾಗಿ ರೂ. 2.00ಲಕ್ಷ ನಿಗದಿಪಡಿಸಿದೆ.

ಅನುಬಂಧ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 26ಕ್ಕೆ ಉತ್ತರ

ಅ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಯುವಜನ ಸೇವಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ನೇಮಿಸಲ್ಪಟ್ಟ ನೌಕರರ ವಿವರ ನೀಡುವುದು.

ಉತ್ತರ : ತಾಲ್ಲೂಕು ಮಟ್ಟ - ತಾಲ್ಲೂಕು ಮಟ್ಟದಲ್ಲಿ ಯಾವುದೇ ನೌಕರರನ್ನು ನೇಮಿಸಲ್ಪಟ್ಟಿರುವುದಿಲ್ಲ.

ಜಿಲ್ಲಾ ಮಟ್ಟ : ಜಿಲ್ಲಾ ಮಟ್ಟದಲ್ಲಿ ಯುವಜನ ಸೇವಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು (ಅನುಷ್ಠಾನಗಳಿಸಲು) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ನೇಮಿಸಲ್ಪಟ್ಟ ಅಧಿಕಾರಿ / ನೌಕರರ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆ	ಸಹಾಯಕ ನಿರ್ದೇಶಕರು	ಅಧೀಕ್ಷಕರು	ಲಿಪ್ಯಂತರಿಗಾರರು	ದ್ವಿ.ದ.ಸ.	ಗುಂಪು ಡಿ (ಚಾಲಕರು)	ಸ್ವೀಪರ್	ಸ್ವಾಮೆಜರ್	ಕಾವಲುಗಾರರು
1.	ಬಾಗಲಕೋಟೆ	ಬಸವರಾಜ್ ಅವಳಗಿ	--	--	ನರೇಂದ್ರ ಬಾವಿಕಟ್ಟಿ	ರಾಮರಾವ್	--	--	--
2.	ಬೆಂಗಳೂರು ನಗರ	ಟಿ. ಕೆ. ಗೌಡ	ಸಿ. ಕೆ. ಉಷಾದೇವಿ	--	ಉಷಾರಾಣಿ	ಎಲಸಯ್ಯ	--	--	--
3.	ಬೆಂಗಳೂರು ಗ್ರಾಮಾಂತರ	ರಾಮೇ ಗೌಡ (ಪ್ರಭಾರಿ)	ಎಂ. ಎಲ್. ದೇವಿಕಾ	--	ಮೀನಾಕ್ಷಿ	ಎಸ್. ಬಿ. ಬಾಲಕೃಷ್ಣ	--	--	--
4.	ಬೆಳಗಾವಿ	ಬಸವರಾಜ ಹಡಪದ	ಆರ್.ಎಸ್.ಕಣಬರ್ಗಿ	--	ಎಲ್.ಜಿ. ಹತ್ಯಾರ ಗೌಡ	ಸತೀಶ್ ಬಾಬು	--	--	--
	ಕ್ರೀಡಾ ವಸತಿ ನಿಲಯ	--	ಕದರಪ್ಪ	--	--	--	--	ಎನ್.ಡಿ. ದೊಡ್ಡಮನಿ	ಶಂಕರ
5.	ಬಳ್ಳಾರಿ	ಎಸ್. ಆರ್. ಸುರೇಶಬಾಬು	ಎಂ. ಚೆಲುವಯ್ಯ	--	ಮಲಕಪ್ಪ	--	--	--	--
	ಕ್ರೀಡಾ ವಸತಿ ನಿಲಯ	--	--	--	ಗ್ರೇಸಿ	--	ಶಿವಣ್ಣ	ಪ್ರಭಾವಮ್ಮ	ಪೆಚಾಲಯ್ಯ
6.	ಬೀದರ್	ಜಿತೇಂದ್ರ ಶೆಟ್ಟಿ	ಆರ್. ಜಿ. ನಾಡಗೀರ್	--	ಪದ್ಮಾವತಿ	ಶಿವಾಜ್	--	--	--
7.	ಬಿಜಾಪುರ	ಸತೀಶ್ ಸಜ್ಜನರ	ಸಿದ್ಧರಾಮ ಲೋಣಿ	--	ಚಿಂಚಲಿ	ಧನರಾಜ್	--	--	--

	ಕ್ರೀಡಾ ವಸತಿ ನಿಲಯ	--	--	--	ಎಂ. ಎಸ್. ಹಿರೇಮಠ ಅಡಿಗೆಯವರು	--	ಎಂ.ಕೆ. ಪಡಶೆಟ್ಟಿ	--	--
8.	ಚಾಮರಾಜನಗರ	ಸುಭಾಷ್‌ಚಂದ್ರ	--	--	ಎಸ್. ಬಿ.	ಎಸ್. ನಾಗರಾಜ್	--	--	--
	ಕ್ರೀಡಾ ವಸತಿ ನಿಲಯ	--	ಕೆ. ಆರ್. ಜಯಲಕ್ಷ್ಮಿ	--	--	--	--	--	--
9.	ಚಿಕ್ಕಮಗಳೂರು	ಎಂ. ಎನ್. ಸಿದ್ಧರಾಮಪ್ಪ	ವಿಶ್ವನಾಥ	--	ಟಿ. ಆರ್. ಸಂತೋಷ	ರಂಗಪ್ಪ	--	--	--
10.	ಚಿತ್ರದುರ್ಗ	ಮಹಮದ್ ಮಹೀಬುಲ್ಲಾ	ಎಂ. ಕೆ. ಇಂದಿರಾ	--	ರಾಜಶೇಖರ	ಆರ್.ಟಿ.ಸರೋಜಮ್ಮ	--	--	--
11.	ದಕ್ಷಿಣ ಕನ್ನಡ	ಎಂ. ಸಿ. ರಮೇಶ್	ಪಿ. ಲಕ್ಷ್ಮೀಬಾಯಿ	--	ತಿರುಮಲೇಶ	ಬಾಲಕೃಷ್ಣ	--	--	--
12.	ದಾವಣಗೆರೆ	ಎಂ. ಚಂದ್ರಶೇಖರ	--	ಬಿ.ಎಚ್. ಲತಾ	ಕೆ. ಮನೋಹರ	ಎನ್. ಬಾಬು	--	--	--
	ಕ್ರೀಡಾ ವಸತಿ ನಿಲಯ	--	ಶ್ರೀನಿವಾಸ	--	ಜಗದೀಶ	--	--	ಸುಭಾಷ್	ರವಿಕುಮಾರ
13.	ಧಾರವಾಡ	ರಾಜು ಬಾವಿಹಳ್ಳಿ	ಕೆ. ಶಂಕರ	--	ನಳಿನಿ ಅನಗೋಳ್ಕರ	ಶಾಂತವ್ವ ಮೂಗಬಸವ	--	--	--
	ಕ್ರೀಡಾ ವಸತಿ ನಿಲಯ	--	ಪಿ.ಎಂ. ನಡುವಿನಮನಿ	--	--	--	--	--	--
14.	ಗದಗ	ದೇವರಾಜಮ್ಮ	--	--	ವೈ. ಆರ್. ಹರಿಜನ	ಕೆ. ಎಂ. ಪಾಟೀಲ	--	--	--
	ಕ್ರೀಡಾ ವಸತಿ ನಿಲಯ	--	ಆರ್. ಎಚ್. ದೊಡ್ಡಮನಿ	--	--	--	--	--	--
15.	ಗುಲ್ಬರ್ಗಾ	ಬಂಡಪ್ಪ	--	--	--	ಶಾಂತರಾಜ್	--	--	--
16.	ಹಾಸನ	ಎನ್. ಡಿ. ಜಯರಾಂ	--	--	ಹೆಚ್. ಎನ್. ಗೋಪಾಲಕೃಷ್ಣ	ಕೃಷ್ಣೇಗೌಡ	--	--	--

17.	ಹಾಪೆರಿ	ಸುಚೇತ ಎಂ. ಸೆಲಗಿ	ಅಮೃತ ಎನ್. ಅಜ್ಜಗ್ಗಿ	--	ಶಿಂದೆ	ಎಂ. ಮುನಿರಾಜು	--	--	--
18.	ಕೊಡಗು	ಕೆ. ಸುರೇಶ್	ಜಿ. ಗಾಯತ್ರಿ	--	ಜಿ. ನಂಜುಂಡ	ಧರ್ಮಾಧರ್ಮಾ	--	--	--
19.	ಕೋಲಾರ	ಎಂ. ರಾಯಪ್ಪ	--	--	ಮೊಹಮದ್‌ಅಲಿಖಾನ	ಖಾಂತಮ್ಮ	--	--	--
	ಕ್ರೀಡಾ ಪಟು ನಿಲಯ	--	ಕೆ. ಶಶಿಕಲಾ	--	--	--	--	--	--
20.	ಕೊಪ್ಪಳ	ಎಲಾನ್ ಎನ್. ಫಾಜಿ	--	--	--	ದೇವಮ್ಮ ಮಡ್ಡಿ	--	--	--
	ಕ್ರೀಡಾ ಪಟು ನಿಲಯ	--	ಎನ್. ಎಚ್. ಉಚ್ಚಾನ್ ಚೆಗ್ಗ	--	--	--	--	--	--
21.	ಮಂಡ್ಯ	ಹೆಚ್. ಸಿ. ಮಂಜಾಶ	ಮಾಧುಕಾಮಾಚ್ಚೆ	--	ಪಿ. ಅಂಜನಪ್ಪ	ಗುರುಚಿ	--	--	--
	ಕ್ರೀಡಾ ಪಟು ನಿಲಯ	--	ಮಾಲಿ	--	--	--	--	--	--
22.	ಮೈಸೂರು	ಎಂ. ಎನ್. ರವೀಶ	ನಿಸಾರ್‌ಅಹಮದ್	--	ಜಯಮ್ಮ	ವೆಂಕಟೇಶ	--	--	--
	ಕ್ರೀಡಾ ಪಟು ನಿಲಯ	--	ಎನ್. ಟಿ. ಜೋಗ ದಿನೇಶ	--	--	--	--	--	--
23.	ರಾಯಚೂರು	ಕೃಷ್ಣಕೆಳ್ಳಿ (ಪ್ರಭಾರಿ)	ಕೃಷ್ಣಕೆಳ್ಳಿ	--	ಕರಿಯಪ್ಪ	ಪಿ. ಪ್ರಕಾಶ	--	--	--
	ಕ್ರೀಡಾ ಪಟು ನಿಲಯ	--	--	--	ಗೋವಿಂದಪ್ಪ ರಾಮು (ಅಡಗೆಯವರು)	--	ಅಲಿಯು ಸುಭಾಷ್ ಡ್ರಿನ್ಗೂ	ಹಾಜ್ಜು	
24.	ಶಿವಮೊಗ್ಗ	ಎ ಪ್ರತಾಪಕುಮಾರ	ಸುಜೀಲಾ	--	ಎಂ. ಪಿ. ಲಕ್ಷ್ಮಿಪತಿ	ಪಿ. ಪ್ರಕಾಶ	ಕೊಯಮ್ಮ	--	--
	ಕ್ರೀಡಾ ಪಟು ನಿಲಯ	--	ಭಾಗ್ಯಮ್ಮ	--	--	--	--	--	--

25.	ತುಮಕೂರು	ಸಿ. ಯೂ. ಈರಪ್ಪ	ಎಂ. ಸಿ. ಯೋಗೀಶ್	--	ಚಿಕ್ಕಲಿಂಗಪ್ಪ	ಶಾಂತಕುಮಾರ	--	--	--
	ಕ್ರೀಡಾ ಮಸತಿ ನಿಲಯ	--	ಎಂ. ಲಕ್ಷ್ಮಿ	--	--	--	--	--	--
26.	ಉಡುಪಿ	ಸಿ. ಬಿ. ರಂಗಯ್ಯ	ಎಂ. ಸಿ. ಯೋಗೀಶ್	--	--	ಡಿ. ಕೃಷ್ಣಮೂರ್ತಿ	--	--	--
	ಕ್ರೀಡಾ ಮಸತಿ ನಿಲಯ	--	ಯು. ಪ್ರೇಮ	--	--	--	--	--	--
27.	ಉತ್ತರ ಕನ್ನಡ	ಪ್ರಕಾಶ ರೇವಣಕರ	--	--	ಶ್ರೀಕಾಂತ ಪ್ರಭು	ಬಾಬು ಕದಮ್	--	--	--
28.	ರಾಮನಗರ	ರಾಮೇಗೌಡ	ಟಿ. ಜಯಲಕ್ಷ್ಮಿ	--	ಪಾರ್ಥಸಾರಥಿ	ಕೃಷ್ಣ ಸಿಂಗ್	--	--	--
	ಕ್ರೀಡಾ ಮಸತಿ ನಿಲಯ	--	ಅನಿತಾ ಆರ್.	--	--	--	--	--	--
29.	ಚಿಕ್ಕಬಳ್ಳಾಪುರ	ಎಂ. ರಾಯಪ್ಪ	ಕೆ.ಎಲ್.ಚನ್ನಕೃಷ್ಣಪ್ಪ	--	ಎ. ರತ್ನಮ್ಮ	ಮೋಹನ ಸಿಂಗ್	--	--	--

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 05 : (31)

ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)

ವಿಷಯ : ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಉದ್ಭವವಾಗಿರುವ ಬಗ್ಗೆ.

ಉತ್ತರಿಸುವ ಸಚಿವರು : ಶ್ರೀ ಕೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರಗಳು
1.	ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಮುಂಗಾರು ಮಳೆ ವಿಫಲವಾಗಿದ್ದು ಬರಗಾಲ ಪರಿ ಸ್ಥಿತಿ ಉದ್ಭವ ವಾಗಿರುವ ಬಗ್ಗೆ ವರದಿಗಳು ಸರ್ಕಾರಕ್ಕೆ ಬಂದಿವೆಯೇ?	ರಾಜ್ಯದ ಮುಂಗಾರು ಮಳೆಯು ಮೇ ತಿಂಗಳ ಕೊನೆಯ ವಾರದಲ್ಲಿ ಆರಂಭಗೊಂಡಿರುತ್ತದೆ. ರಾಜ್ಯದಲ್ಲಿ ಮುಂಗಾರು ಮಳೆಯು ಜೂನ್, ಜುಲೈ, ಆಗಸ್ಟ್, ಸೆಪ್ಟಂಬರ್ ತಿಂಗಳುಗಳ ಅವಧಿಯಲ್ಲಿ ಆಗುತ್ತದೆ. ಈಗ ಮುಂಗಾರು ಋತುವಿನ ಆರು ವಾರಗಳು ಕಳೆದಿರುತ್ತದೆ ಹಾಗೂ ಮಳೆ ಇನ್ನೂ ಸುಮಾರು ಹತ್ತಿ (10) ವಾರಗಳು ಹಾಕಿ ಇರುತ್ತದೆ. ಕಳೆದ 6 ವಾರಗಳ ಮಳೆ ಪ್ರಮಾಣವನ್ನು ಗಮನಿಸಿದರೆ ರಾಜ್ಯ 6 ಜಿಲಲೆಗಳಲ್ಲಿ (ಬಿಜಾಪುರ, ರಾಯಚೂರು, ಬಾಗಲಕೋಣೆ, ಗುಲ್ಬರ್ಗಾ, ಬಳ್ಳಾರಿ, ಕೊಪ್ಪಳ), ತೀವ್ರ ಮಳೆ ಕೊರತೆ, 14 ಜಿಲ್ಲೆಗಳಲ್ಲಿ (ರಾಮನಗರ, ದಾವಣಗೆರೆ, ಮೈಸೂರು, ಬೀದರ್, ಬೆಳಗಾಂ, ಹಾವೇರಿ, ಧಾರವಾಡ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಕೊಡಗು, ದಕ್ಷಿಣಕನ್ನಡ, ಉಡುಪಿ, ಉತ್ತರ ಕನ್ನಡ) ಮಳೆ ಪ್ರಮಾಣದಲ್ಲಿ ಆಮಾನ್ಯ ಕೊರತೆ, ಉಳಿದ 8 ಜಿಲ್ಲೆಗಳಲ್ಲಿ ವಾಡಿಕೆ ಮತ್ತು ಹೆಚ್ಚಿನ ಮಳೆ ಆಗಿರುವ ವರದಿಯಾಗಿದೆ.
2.	ಹಾಗಿದ್ದಲ್ಲಿ, ಈ ಬಗ್ಗೆ ಯಾವ ಯಾವ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ?	ಎಲ್ಲಾ 29 ಜಿಲ್ಲಾಧಿಕಾರಿಗಳಿಂದ ವರದಿ ಬಂದಿದೆ.
3.	ಬೀದರ್ ಜಿಲ್ಲೆಯಲ್ಲಿಯೂ ಸಹ ಮುಂಗಾರು ಮಳೆ ವಿಫಲವಾಗಿದ್ದು	ಬೀದರ್ ಜಿಲ್ಲೆಯಲ್ಲಿ ಮುಂಗಾರು ಮಳೆಯು ಜೂನ್ 16 2008ರವರೆಗೆ ವಾಡಿಕೆ 212 ಮಿಲಿಮೀಟರ್

	ಬರಗಾಲದ ಪರಿಸ್ಥಿತಿ ಉದ್ಭವವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಆಗಬೇಕಾಗಿದ್ದು ಇದುವರೆಗೂ ಜಿಲ್ಲೆಯಲ್ಲಿ ಸರಾಸರಿ ಮಳೆಯು 123 ಮಿಲಿಮೀಟರ್ ಆಗಿರುತ್ತದೆ ಹಾಗೂ ಇದು ಶೇಕಡಾ 42ರಷ್ಟು ಕೊರತೆ ಇದೆ. ಬೀದರ್ ಜಿಲ್ಲೆಯಲ್ಲಿ ಜೂನ್ 01 ರಿಂದ 10ರ ವರೆಗೆ ಹಾಗೂ ಜೂನ್ 25ರಿಂದ ಜುಲೈ 1ರ ವರೆಗೆ ಮಳೆಯಾಗಿರುತ್ತದೆ. ಬೀದರ್ ಜಿಲ್ಲೆಯ ಯಾವುದೇ ತಾಲ್ಲೂಕಿನಲ್ಲಿ ಸತತ ನಾಲ್ಕು ವಾರಗಳ ಒಣ ಹವೆ ಪರಿಸ್ಥಿತಿ ಪ್ರಸ್ತುತ ಮುಂಗಾರಿನಲ್ಲಿ ಇದ್ದಿರುವ ಬಗ್ಗೆ ವರದಿಯಾಗಿರುವುದಿಲ್ಲ. ಈ ವರದಿಗಳ ಪ್ರಕಾರ ಬೀದರ್‌ನಲ್ಲಿ ಮುಂಗಾರು ಮಳೆ ವಿಫಲವಾಗಿದೆ ಎಂದು ಹೇಳಲು ಸದ್ಯಕ್ಕೆ ಬರುವುದಿಲ್ಲ.
4.	ಹಾಗಿದ್ದಲ್ಲಿ, ಸರ್ಕಾರವು ಈ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸಲು ಕೈಗೊಂಡಿರುವ ಕ್ರಮಗಳೇನು?	ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ರಾಜ್ಯಮಟ್ಟದ ಹವಾಮಾನ ಕಾವಲು ಸಮಿತಿ ಸಭೆಯಲ್ಲಿ ಪ್ರತಿವಾರ ಮುಂಗಾರು ಮಳೆಯ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಮಳೆಯ ಕೊರೆತ ಮುಂದುವರೆದಲ್ಲಿ ಬರಪೀಡಿತವೆಂದು ಘೋಷಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.
5.	ಇಲ್ಲಿಯವರೆವಿಗೂ ಜಿಲ್ಲೆಯಲ್ಲಿ ಬರಗಾಲ ಕಾಮಗಾರಿಗಳನ್ನು ಆರಂಭಿಸಲಾಗಿದೆಯೇ? ಹಾಗಿದ್ದಲ್ಲಿ, ಇದಕ್ಕಾಗಿ ಎಷ್ಟು ಹಣವನ್ನು ಈವರೆವಿಗೆ ವೆಚ್ಚ ಮಾಡಲಾಗಿದೆ? ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ?	ಬೀದರ್ ಜಿಲ್ಲೆಯಲ್ಲಿ ಇದುವರೆಗಿನ ಮುಂಗಾರು ಮಳೆಯ ಕೊರತೆ ಇರುವುದನ್ನು ಮನಿಸಿ ಪರಿಸ್ಥಿತಿಯನ್ನು ಸಂಧರ್ಭೋಚಿತವಾಗಿ ನಿಭಾಯಿಸಲು ರೂ.100-00 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 6 : (27)

ಸದಸ್ಯರ ಹೆಸರು : ಶ್ರೀ ಟಿ. ಬಿ. ಜಯಚಂದ್ರ (ಶಿರಾ)

ಕ್ರ. ಸಂ.	ಪ್ರಶ್ನೆ	ಉತ್ತರಗಳು
ಅ.	ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಹಾಗಲವಾಡಿ, ಮಂಚಲದೊರೆ, ಹೊಸಕೆರೆ ಮತ್ತು ಅಳಿಲುಘಟ್ಟ ಕೆರೆಗಳಿಗೆ ಹೇಮಾ ವತಿ ನೀರನ್ನು ಹರಿಸಲು ಸರ್ಕಾರ ತೀರ್ಮಾನಿಸಿದ್ದು, ಈ ನೀರನ್ನು ಸಹಾ ಹಂಚಿಕೆ ಮಾಡಿ ಆದೇಶ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು, ಸರ್ಕಾರದ ಗಮನಕ್ಕೆ ಬಂದಿದೆ. Yes, it has come to the notice of the Government.
ಆ.	ಹಾಗಿದ್ದಲ್ಲಿ ಅದನ್ನು ಅನುಷ್ಠಾನ ಗೊಳಿಸಲು ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು?	ದಿನಾಂಕ :8-10-2003 ರ ಸರ್ಕಾರಿ ಆದೇಶದಲ್ಲಿ ತುಮಕೂರು ಶಾಖಾ ನಾಲೆಯ 90ನೇ ಕಿ.ಮೀ. ನಿಂದ ಹಾಗಲವಾಡಿ ಕೆರೆಗ, ಹಾಗಲವಾಡಿ ಹೋಬಳಿಯ ಅಳಿಲುಘಟ್ಟ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಅಗತ್ಯವಿರುವ 200 ಎಂ.ಸಿ.ಎಫ್.ಟಿ. ಪ್ರಮಾಮದ ನೀರನ್ನು ಕುಡಿಯುವ ನೀರು ಸರಬರಾಜಿಗೋಸ್ಕರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಒದಗಿಸುವ ಪ್ರಸ್ತಾವನೆಗೆ ಕೆಲವೊಂದು ಷರತ್ತುಗಳೊಂದಿಗೆ ಸಹಮತಿ ನೀಡಿರುತ್ತದೆ. ಸದರಿ ಯೋಜನೆಯನ್ನು ಜಿಲ್ಲಾ ಪಂಚಾಯತ್ ನಿಂದ ಕೈಗೊಳ್ಳುವುದೇ ಅಥವಾ ಕಾವೇರಿ ನೀರಾವರಿ ನಿಗಮದಿಂದ ಕೈಗೊಳ್ಳುವುದೇ ಎಂಬ ಬಗ್ಗೆ ಸರ್ಕಾರ ಹಾಗೂ ನಿಗಮದ ಮಧ್ಯೆ ಪತ್ರ ವ್ಯವಹಾರ ನಡೆದಿದ್ದು, ನಂತರ ಸರ್ಕಾರಿ ಆದೇಶ ಸಂಖ್ಯೆ : ಸನೀಇ 110 ಕೆಜಿದು 2007, ದಿನಾಂಕ : 23-04-2007 ರಲ್ಲಿ ಹಾಗಲವಾಡಿ ಕೆರೆಗೆ

		ನೀರು ಒದಗಿಸಿ ಕುಡಿಯುವ ನೀರಿನ ಅನುಕೂಲ ಮಾಡಿಕೊಡಲು ಕೆರೆಯನ್ನು ಸಣ್ಣ ನೀರಾವರಿ ಇಲಾಖೆಯಿಂದ ಕಾವೇರಿ ನೀರಾವರಿ ನಿಗಮಕ್ಕೆ ಹಸ್ತಾಂತರಿಸಲು ಆದೇಶಿಸಲಾಗಿತ್ತು. ಆದರೆ, ಸದರಿ ಕೆರೆಯು ಕೃಷ್ಣಾ ಕಣಿವೆಯಲ್ಲಿ ಬರುತ್ತಿರುವುದರಿಂದ, ಕಾವೇರಿ ನೀರಾವರಿ ನಿಗಮಕ್ಕೆ ಹಸ್ತಾಂತರಿಸಿಕೊಳ್ಳುವ ಬಗ್ಗೆ ನಿರ್ದೇಶನವನ್ನು ದಿನಾಂಕ : 22-05-2007ರಲ್ಲಿ ಕಾವೇರಿ ನೀರಾವರಿ ನಿಗಮವು ಸರ್ಕಾರವನ್ನು ಕೋರಿರುತ್ತದೆ. ಹಾಗಲವಾಡಿ ಕೆರೆ, ಅಳಲುಘಟ್ಟ ಕೆರೆ, ಹೊಸಕೆರೆ ಹಾಗೂ ಮಠದಹಳ್ಳಿ ಕೆರೆಗಳಿಗೆ ನೀರು ಹರಿಸುವ ಸಲುವಾಗಿ ಒಟ್ಟಾರೆ ಪ್ರಸ್ತಾವನೆಯನ್ನು ರೂ.64.00ಕೋಟಿಗಳ ರೇಖಾ ಅಂದಾಜಿನೊಂದಿಗೆ ಹಾಗೂ ಈ ಕೆರೆಗಳಿಗೆ ಪ್ರತ್ಯೇಕವಾಗಿ ನೀರು ಹರಿಸುವ ಪ್ರಸ್ತಾವನೆಗಳನ್ನು (ಹಾಗಲವಾಡಿ ಕೆರೆ - ರೂ.43.00ಕೋಟಿ, ಅಳಲುಘಟ್ಟ, ಹೊಸಕೆರೆ - ರೂ. 12.40 ಕೋಟಿ ಹಾಗೂ ಮಠದಹಳ್ಳಿ ಕೆರೆ - ರೂ.5.29 ಕೋಟಿ) ಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಇವರು ದಿನಾಂಕ : 26-09-2007 ರಂದು ಸಲ್ಲಿಸಿದ್ದರು. ಕಾವೇರಿ ಜಲವಿವಾದದ ತೀರ್ಪಿನ ವಿರುದ್ಧ ಸರ್ವೋಚ್ಚನ್ಯಾಯಾಲಯದ ಮುಂದೆ ರಾಜ್ಯವು ವಿಶೇಷ ಅನುಮತಿ ಅರ್ಜಿ ಸಂಖ್ಯೆ : 7808/2007ಅನ್ನು ಸಲ್ಲಿಸಿರುತ್ತದೆ. ತಮಿಳುನಾಡು ಸರ್ಕಾರವೂ ಸಹ ಸರ್ವೋಚ್ಚ ನ್ಯಾಯಾಲಯದಲ್ಲಿ ಮಧ್ಯಕಾಲೀನ ಅರ್ಜಿ ಸಂಖ್ಯೆ : 2456 / 2007ಅನ್ನು (I.A) ಸಲ್ಲಿಸಿದ್ದು, ಕರ್ನಾಟಕ ರಾಜ್ಯವು ಕಾವೇರಿ ನ್ಯಾಯಾಧಿಕರಣವು ತನ್ನ ಅಂತಿಮ ಆದೇಶದ ವಿರುದ್ಧವಾಗಿ ತೆಗೆದುಕೊಂಡಿರುವ ಯೋಜನೆಗಳನ್ನು ಮುಂದುವರೆಸದಂತೆ ನಿರ್ದೇಶನ ನೀಡಲು ಕೋರಿರುತ್ತದೆ. ಈ ಹಿನ್ನೆಲೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು ಅಂತಿಮ ಆದೇಶ ನೀಡಿದ ನಂತರ ಸದರಿ ಯೋಜನೆಗೆ ನೀರು ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು.

		Vide Government Order dated : 08-10-2003, concurrence has been given, with certain conditions to , Karnataka Urban Water Supply & Sewerage Board (KUWS & SB) to provide 200 Mcft of water to Hagalavadi tank form 90th Km of Tumkur Branch Canal of Hemavathy Project to provide drinking water to Alilugatta and surrounding villages of hagalavadi Hobli. After correspondence between the Cauvery Neeravari Nigam Ltd. and Government to decide as to whether to take up of this project from Cauvery Neeravari Nigam Ltd. or Zilla Panchayat, the Government vide G.O. No.MI 110 KGD 2007, Dated : 23-04-2007, ordered to transfer Hagalavadi Tank to Cauvery Neeravari Nigam Ltd. from Minor Irrigation Department to provide water to Hagalvadi tank for drinking water purpose. Since this tank comes under Krishna Basin, the Cauvery Neeravari Nigam Ltd., sought directions of Government to take charge of this tank. A comprehensive proposal of Rs. 64.00 Crores to feed water to hagalavadi Tank, Alilugatta and Hosekere, Matadahalli tank and individual proposals to feed water to these tanks (Hagalvadi tank - Rs.43.00 Crores,

		Alilugatta and Hosekere - Rs.12.40 Crores, Matadahalli tank - Rs. 5.29 Crores) was submitted to Government by Cauvery Neeravari Nigam Ltd. on 26-09-2007. The Government of Karnataka has filed special leave petition (No.7808/2007) against the Cauvery Disputes Tribunal Tamilnadu also has filed an interim application (No.2456/2007) and prayed to restrain the Government of Karnataka from continuing with the schemes which are not covered in the final orders of the Tribunal. Hence, after the orders from Supreme Court fo India are passed, providing of water for this scheme would be considered.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 07 : (29)

ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ. (ಶಿರಾ)

ಉತ್ತರಿಸುವ ಸಚಿವರು : ಶ್ರೀ ಮುರುಗೇಶ್ ನಿರಾಣಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರಗಳು
1.	ತುಮಕೂರಿನಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವತಿಯಿಂದ ಇದುವರೆವಿಗೂ ಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ ಎಷ್ಟು? ಈ ಜಮೀನಿನ ಅಭಿವೃದ್ಧಿ ಈಗ ಯಾವ ಹಂತದಲ್ಲಿವೆ.	ಒಟ್ಟು 1825 ಎಕರೆ 31 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಕೈಗಾರಿಕಾ ಪ್ರದೇಶ 1570 ಎಕರೆ 34 ಗುಂಟೆ ಏಕಘಟಕ ಸಂಕೀರ್ಣ 254 ಎಕರೆ 37 ಗುಂಟೆ ಒಟ್ಟು **1825 ಎಕರೆ 31 ಗುಂಟೆ** ಭೂಸ್ವಾಧೀನ ಮತ್ತು ಅಭಿವೃದ್ಧಿ ವಿವರಗಳನ್ನು ಅನುಬಂಧ 1ರಲ್ಲಿ ಲಗತ್ತಿಸಿದೆ.
2.	ಬೆಂಗಳೂರು ಪೂನಾ ರಾಷ್ಟ್ರೀಯ ಹೆದ್ದಾರಿಯ ಇಂಡಸ್ಟ್ರಿಯಲ್ ಕಾರಿಡಾರ್ ಎಂದು ಕೇಂದ್ರ ಸರ್ಕಾರ ಒತ್ತು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬೆಂಗಳೂರು ಪೂನಾ ರಾಷ್ಟ್ರೀಯ ಹೆದ್ದಾರಿಯು ಇಂಡಸ್ಟ್ರೀಯಲ್ ಕಾರಿಡಾರ್ ಒಂದು ಬಾಗ ಎಂದು ಪರಿಗಣಿಸಲು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಾಲಯ, ಭಾರತ ಸರ್ಕಾರ, ಇವರು ಚೆನ್ನೈ-ಬೆಂಗಳೂರು-ಮುಂಬೈ ಕೈಗಾರಿಕಾ ಕಾರಿಡಾರ್, ಅಭಿವೃದ್ಧಿಗಾಗಿ 'Concept paper'ನ್ನು ಸಲಹೆಗಾರರ (Consultant)ಮುಖಾಂತರ ತಯಾರಿಸಲು ನಿರ್ಧರಿಸಲಾಗಿರುತ್ತದೆ. IDFC Projects ಸಂಸ್ಥೆಯವರನ್ನು ಈ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿಗೆ ಸಲಹೆಗಾರರನ್ನಾಗಿ ನೇಮಿಸಲಾಗಿರುತ್ತದೆ. ಈ ಬಗ್ಗೆ IDFC Projects ಸಂಸ್ಥೆಯವರು ತನ್ನ ಸಹವರ್ತಿ ಸಂಸ್ಥೆಗಳಾದ IDEC ಸಂಸ್ಥೆಯೊಂದಿಗೆ ಒಡಗೂಡಿ ವರದಿ ತಯಾರಿಸುವ ಬಗ್ಗೆ ಕಾರ್ಯನಿರತರಾಗಿದ್ದಾರೆ.

3.	ಶಿರಾದಲ್ಲಿ ಸಾಕಷ್ಟು ಸರ್ಕಾರಿ ಜಮೀನಿದ್ದು ಕೈಗಾರಿಕಾ ಪ್ರದೇಶಗಳನ್ನು ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ಕೈಗಾರಿಕೆಗಳ ಸ್ಥಾಪನೆಗಾಗಿ ಕೈಗಾರಿಕೋದ್ಯಮಿಗಳಿಂದ ಬೇಡಿಕೆ ಬಂದಲ್ಲಿ ಸರ್ಕಾರಿ ಜಮೀನನ್ನು ಕಂದಾಯ ಇಲಾಖೆಯಿಂದ ವರ್ಗಾವಣೆ ಪಡೆದು ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಲು ಕ್ರಮ ವಹಿಸಲಾಗುವುದು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

ತುಮಕೂರು ಮತ್ತು ತುಮಕೂರು ಜಿಲ್ಲೆಯಲ್ಲಿ ಕೈಗಾರಿಕಾ ಪ್ರದೇಶ ಮತ್ತು ಏಕ ಘಟಕ ಸಂಕೀರ್ಣಗಳಿಗೆ ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ವಿವರಗಳು

ಕ್ರ. ಸಂ.	ಕೈಗಾರಿಕಾ ಪ್ರದೇಶ ಏಕ ಘಟಕ ಸಂಕೀರ್ಣದ ಹೆಸರು	ಗ್ರಾಮ ತಾಲ್ಲೂಕು ಜಿಲ್ಲೆ	ಕಲಂ 28(4) ರಂತೆ ಅಧಿಸೂಚಿತ ವಿಸ್ತೀರ್ಣ ಎ ಗು	ಅಧಿಸೂಚನೆಯ ಸಂಖ್ಯೆ ಮತ್ತು ದಿನಾಂಕ	ಅಭಿವೃದ್ಧಿಯ ವಿವರಗಳು
1. ಕೈಗಾರಿಕಾ ಪ್ರದೇಶ					
1	ಸತ್ಯಮಂಗಲ	ಸತ್ಯಮಂಗಲ ತುಮಕೂರು ತಾಲ್ಲೂಕು	106-20	ಸಿಐ 237 ಎಸ್‌ಪಿಕ್ಯೂ 83 ದಿನಾಂಕ 8-11-85	ಅಭಿವೃದ್ಧಿ ಕಾರ್ಯಗಳು ಪೂರ್ಣ ಗೊಂಡಿದ್ದು ಕೈಗಾರಿಕೋದ್ಯ ಮಿಗಳಿಗೆ ಹಂಚಿಕೆ ಮಾಡಲಾಗಿದೆ. ಕಾಮಗಾರಿಗಳು ಬಾಕಿ ಇರುವುದಿಲ್ಲ.
2	ಹಿರೇಹಳ್ಳಿ	ಹಿರೇಹಳ್ಳಿ ತುಮಕೂರು ತಾಲ್ಲೂಕು	160-35	ಸಿಐ 84 ಎಸ್‌ಪಿಕ್ಯೂ 83 ದಿನಾಂಕ 5-6-86	ಅಭಿವೃದ್ಧಿ ಕಾರ್ಯಗಳು ಪೂರ್ಣ ಗೊಂಡಿದ್ದು ಕೈಗಾರಿಕೋದ್ಯ ಮಿಗಳಿಗೆ ಹಂಚಿಕೆ ಮಾಡಲಾಗಿದೆ. ಕಾಮಗಾರಿಗಳು ಬಾಕಿ ಇರುವುದಿಲ್ಲ.
3	ಅಂತರಸನ ಹಳ್ಳಿ 1ನೇ ಹಂತ	ಹಿರೇಹಳ್ಳಿ ತುಮಕೂರು ತಾಲ್ಲೂಕು	216-16	ಸಿಐ 54 ಎಸ್‌ಪಿಕ್ಯೂ 88 ದಿನಾಂಕ 14-12-90	ಅಭಿವೃದ್ಧಿ ಕಾರ್ಯಗಳು ಪೂರ್ಣ ಗೊಂಡಿದ್ದು ಕೈಗಾರಿಕೋದ್ಯ ಮಿಗಳಿಗೆ ಹಂಚಿಕೆ ಮಾಡಲಾಗಿದೆ. ಕಾಮಗಾರಿಗಳು ಬಾಕಿ ಇರುವುದಿಲ್ಲ.
4	ಅಂತರಸನ ಹಳ್ಳಿ 2ನೇ ಹಂತ	ಹಿರೇಹಳ್ಳಿ ತುಮಕೂರು ತಾಲ್ಲೂಕು	252-32	ಸಿಐ 208 ಎಸ್‌ಪಿಕ್ಯೂ 96 ದಿನಾಂಕ 21-1-97	ಅಭಿವೃದ್ಧಿ ಕಾರ್ಯಗಳು ಪೂರ್ಣ ಗೊಂಡಿದ್ದು ಕೈಗಾರಿಕೋದ್ಯ ಮಿಗಳಿಗೆ ಹಂಚಿಕೆ ಮಾಡಲಾಗಿದೆ. ಕಾಮಗಾರಿಗಳು ಬಾಕಿ ಇರುವುದಿಲ್ಲ.

5	ಕುಣಿಗಲ್	ಕುಣಿಗಲ್ ತಾಲ್ಲೂಕು	51-59	ಸಿಐ 378 ಎಸ್‌ಪಿಕ್ಯೂ 05 ದಿನಾಂಕ 31-12-05	ಅಭಿವೃದ್ಧಿ ಕಾರ್ಯಗಳು ಪೂರ್ಣ ಗೊಂಡಿದ್ದು ಕೈಗಾರಿ ಕೋದ್ಯ ಮಿಗಳಿಗೆ ಹಂಚಿಕೆ ಮಾಡಲಾಗಿದೆ. ಕಾಮಗಾರಿ ಗಳು ಬಾಕಿ ಇರುವುದಿಲ್ಲ.
6	ಮಂತನಗಾಪುರ 1ನೇ ಹಂತ	ಮಂತನಗಾಪುರ ತುಮಕೂರು ತಾಲ್ಲೂಕು	782-22	ಸಿಐ 25 ಎಸ್‌ಪಿಕ್ಯೂ 07 ದಿನಾಂಕ 3-3-07	ವಿನ್ಯಾಸ ನಕ್ಷೆಯು ಅನುಮೋದನೆ ಗೊಂಡಿದ್ದು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ.
		ಒಟ್ಟು	**1570-34**		
2. ವಿಕಘಟಕ ಸಂಕೀರ್ಣ					
1	ರಿಲಿಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್	ಮುದಿಗೆರೆ ಕಾವಲು ಶಿರಾ ತುಮಕೂರು	1-00	ಸಿಐ 31 ಎಸ್‌ಪಿಕ್ಯೂ 03 ದಿನಾಂಕ 31-7-03	ಕಂಪನಿಗೆ ಹಂಚಿಕೆ ಮಾಡಲಾಗಿದೆ.
2	ಹೆಚ್‌ಪಿಸಿಎಲ್ ಇಂಡಸ್ಟ್ರೀಸ್ ಲಿಮಿಟೆಡ್	ಕುರುಡಿಹಳ್ಳಿ ಕುಣಿಗಲ್ ತುಮಕೂರು	1-02	ಸಿಐ 189 ಎಸ್‌ಪಿಕ್ಯೂ 98 ದಿನಾಂಕ 29-3-01	ಕಂಪನಿಗೆ ಹಂಚಿಕೆ ಮಾಡಲಾಗಿದೆ.
3	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ	ಅಣ್ಣಾಪುರ ಕುಣಿಗಲ್ ತುಮಕೂರು	1-20	ಸಿಐ 91 ಎಸ್‌ಪಿಕ್ಯೂ 84 ದಿನಾಂಕ 19-11-85	ಕಂಪನಿಗೆ ಹಂಚಿಕೆ ಮಾಡಲಾಗಿದೆ.
4	ಕೆಎಸ್‌ಆರ್‌ಟಿಸಿ ಕೈಮಗ್ಗ ಅಭಿವೃದ್ಧಿ ನಿಗಮ	ಅಜ್ಜನಕುಂಟೆ ಶಿರಾ ತುಮಕೂರು	1-28	ಸಿಐ 211 ಎಸ್‌ಪಿಕ್ಯೂ 06 ದಿನಾಂಕ 22-7-06	ಕಂಪನಿಗೆ ಹಂಚಿಕೆ ಮಾಡಲಾಗಿದೆ.

5	ಎವಿಟಿ ಇಂಡಸ್ಟ್ರೀಸ್	ಹಾಲ್ಕುರಿಕೆ ತಿಪಟೂರು ತುಮಕೂರು	27-01	ಸಿಐ 254 ಎಸ್‌ಪಿಕ್ಯೂ 99 ದಿನಾಂಕ 17-2-2000	ಕಂಪನಿಗೆ ಹಂಚಿಕೆ ಮಾಡಲಾಗಿದೆ.
6	ಹಟ್ಟಿ ಗೋಲ್ಡ್ ಮೈನ್ಸ್	ಗುಂಗರಪೇಟೆ ಶಿರಾ ತುಮಕೂರು	8-00	ಸಿಐ 121 ಎಸ್‌ಪಿಕ್ಯೂ 96 ದಿನಾಂಕ 6-2-99	ಕಂಪನಿಗೆ ಹಂಚಿಕೆ ಮಾಡಲಾಗಿದೆ.
			2-00	ಸಿಐ 121 ಎಸ್‌ಪಿಕ್ಯೂ 96 ದಿನಾಂಕ 19-1-99	ಕಂಪನಿಗೆ ಹಂಚಿಕೆ ಮಾಡಲಾಗಿದೆ.
7	ಕೆಎಸ್‌ಆರ್‌ಟಿಸಿ ಇಂಡಸ್ಟ್ರೀಸ್	ಚಾಕೇನಹಳ್ಳಿ ಕುಣಿಗಲ್ ತುಮಕೂರು	2-28	ಸಿಐ 211 ಎಸ್‌ಪಿಕ್ಯೂ 06 ದಿನಾಂಕ 22-7-06	ಕಂಪನಿಗೆ ಹಂಚಿಕೆ ಮಾಡಲಾಗಿದೆ.
8	ಟಿ.ವಿ.ಎಸ್. ಎಲೆಕ್ಟ್ರಾನಿಕ್ಸ್	ಹಿರೇಹಳ್ಳಿ ತುಮಕೂರು ತಾಲ್ಲೂಕು ತುಮಕೂರು	71-32	ಸಿಐ 84 ಎಸ್‌ಪಿಕ್ಯೂ 87 ದಿನಾಂಕ 21-7-87	ಕಂಪನಿಗೆ ಹಂಚಿಕೆ ಮಾಡಲಾಗಿದೆ.
			9-26	ಸಿಐ 106 ಎಸ್‌ಪಿಕ್ಯೂ 85 ದಿನಾಂಕ 17-6-89	ಕಂಪನಿಗೆ ಹಂಚಿಕೆ ಮಾಡಲಾಗಿದೆ.
9	ಫೀನಿಕ್ಸ್ ಇಂಜಿನಿಯರಿಂಗ್ ಪ್ರೈ.ಲಿ.	ನಡೆಮಾವಿನಪುರ ಕುಣಿಗಲ್ ತುಮಕೂರು	7-33	ಸಿಐ 66 ಎಸ್‌ಪಿಕ್ಯೂ 84 ದಿನಾಂಕ 21-2-86	ಕಂಪನಿಗೆ ಹಂಚಿಕೆ ಮಾಡಲಾಗಿದೆ.

9	ಫೀನಿಕ್ಸ್ ಇಂಜಿನಿಯರಿಂಗ್ ಪ್ರೈ.ಲಿ.	ನಡೆಮಾವಿನಪುರ ಕುಣಿಗಲ್ ತುಮಕೂರು	7-33	ಸಿಐ 66 ಎಸ್‌ಪಿಕ್ಯೂ 84 ದಿನಾಂಕ 21-2-86	ಕಂಪನಿಗೆ ಹಂಚಿಕೆ ಮಾಡಲಾಗಿದೆ.
10	ಎಚ್‌ಎಂಟಿ ಇಂಜಿನಿಯರಿಂಗ್ ಪ್ರೈ.ಲಿ.	ದೇವರಾಯಪಟ್ಟಣ ತುಮಕೂರು	105-00	ಸಿಐ 10 ಎಸ್‌ಪಿಕ್ಯೂ 76 ದಿನಾಂಕ 24-6-76	ಕಂಪನಿಗೆ ಹಂಚಿಕೆ ಮಾಡಲಾಗಿದೆ.
			12-22	ಸಿಐ 163 ಎಸ್‌ಪಿಕ್ಯೂ 78 ದಿನಾಂಕ 19-2-79	ಕಂಪನಿಗೆ ಹಂಚಿಕೆ ಮಾಡಲಾಗಿದೆ.
			12-22	ಸಿಐ 163 ಎಸ್‌ಪಿಕ್ಯೂ 78 ದಿನಾಂಕ 19-2-79	ಕಂಪನಿಗೆ ಹಂಚಿಕೆ ಮಾಡಲಾಗಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 19

ಸದಸ್ಯರ ಹೆಸರು : ಶ್ರೀ ಕರಡಿ ಸಂಗಣ್ಣ ಅಮರಪ್ಪ

ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರಗಳು
ಅ.	ನಬಾರ್ಡ್ ಯೋಜನೆಯಡಿ ರಾಜ್ಯದ ಬಯಲು ಪ್ರದೇಶದಲ್ಲಿ ಹೊಸದಾಗಿ ಬ್ಯಾರೇಜ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?	ಭಾರಿ ಮತ್ತು ಮಧ್ಯಮ ನೀರಾವರಿಗೆ ಸಂಬಂಧಿಸಿದಂತೆ ನಬಾರ್ಡ್ ಯೋಜನೆಯಡಿ ಬ್ಯಾರೇಜ್ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ.
ಆ.	ಹಾಗಿದ್ದಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ನಿರ್ಮಿಸ ಲಾಗುವುದು? (ವಿವರ ನೀಡುವುದು)	ಉದ್ಭವಿಸುವುದಿಲ್ಲ.
ಇ.	ತುಂಗಭದ್ರಾ ನೀರಿನ ಲಭ್ಯತೆ ಯಿರುವ ಪ್ರದೇಶಗಳಲ್ಲಿ ಹೊಸದಾಗಿ ಏತ ನೀರಾವರಿ ಯೋಜನೆ ಪ್ರಾರಂಭಿಸಲು ಸರ್ಕಾರ ನಿರ್ಧರಿಸಿದೆಯೇ? ನಿರ್ಧರಿಸಿದಲ್ಲಿ ಯಾವ ತಾಲ್ಲೂಕುಗಳಲ್ಲಿ ನಿರ್ಮಾಣ ಮಾಡಲಾಗುವುದು. ಸಂಪೂರ್ಣ ವಿವರ ನೀಡುವುದು.	ತುಂಗಭದ್ರಾ ನೀರಿನ ಲಭ್ಯತೆ ಇರುವ ಪ್ರದೇಶದಲ್ಲಿ ನೂತನ ಏತ ನೀರಾವರಿ ಯೋಜನೆಗಳ ಬಗ್ಗೆ ನಿರ್ಧರಿಸಿಲ್ಲ, ಆದಾಗ್ಯೂ ತುಂಗಭದ್ರಾ ಜಲಾಶಯದ ಎಚ್ಚುಕಟ್ಟು ಪ್ರದೇಶದಲ್ಲಿ ನೀರಿನ ಕೊರತೆ ಎದುರಿಸುತ್ತಿರುವ ಕ್ಷೇತ್ರಗಳಿಗೆ ಪೂರಕ ನೀರಾವರಿ ಸೌಲಭ್ಯ ಒದಗಿಸುವ ಏತ ನೀರಾವರಿ ಯೋಜನೆಗಳು ವಿವಿಧ ಹಂತದಲ್ಲಿದೆ. 1. ಮೈ ಕಗ್ಗಲ್ ಏತ ನೀರಾವರಿ ಯೋಜನೆ ಬಳ್ಳಾರಿ ತಾ. 2. ಕೆಂಚನ ಗುಡ್ಡ ಏತ ನೀರಾವರಿ ಯೋಜನೆ ಸಿರಗುಪ್ಪ ತಾ. 3. ಒಳ ಬಳ್ಳಾರಿ ಏತ ನೀರಾವರಿ ಯೋಜನೆ ಸಿಂಧನೂರು ತಾ.
ಈ.	ತುಂಗಭದ್ರಾ ಅಣೆಕಟ್ಟು ನಿರ್ಮಾಣ ಕಾಲದಲ್ಲಿ ಕೊಪ್ಪಳ ತಾಲ್ಲೂಕಿನ 33 ಗ್ರಾಮಗಳ ರೈತರು ಭೂಮಿ ಮತ್ತು	

	ವಸತಿಯನ್ನು ಕಳೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ.
ಉ.	ಬಂದಿದ್ದಲ್ಲಿ ಈ ಸಂತ್ರಸ್ತ ರೈತರಿಗೆ ಸರ್ಕಾರ ಯಾವ ರೀತಿ ಪರಿಹಾರ ನೀಡಲಾಗಿದೆ? (ಸಂಪೂರ್ಣ ವಿವರ ನೀಡುವುದು)	ಸಂತ್ರಸ್ತ ರೈತರಿಗೆ ತುಂಗಭದ್ರಾ ಮಂಡಳಿಯ ವತಿಯಿಂದ 1945 ರಿಂದ 1958 ರವರೆಗಿನ ಅವಧಿಯಲ್ಲಿ ಪರಿಹಾರ ನೀಡಲಾಗಿದ್ದು, ವಿವರ ಕೆಳಗಿನಂತಿದೆ. ತುಂಗಭದ್ರಾ ಯೋಜನೆಯ ಎಡಭಾಗದಲ್ಲಿ 40 ಹಳ್ಳಿಗಳು, ನೀರಿನಿಂದ ತೊಂದರೆಗೊಳಪಟ್ಟಿರುತ್ತದೆ ಅದರಲ್ಲಿ 10 ಹಳ್ಳಿಗಳು ಮತ್ತು ಹೊಲಗಳು ಪೂರ್ಣ ಮುಳುಗಡೆಯಾಗಿರುತ್ತವೆ. 24 ಹಳ್ಳಿಗಳು ಪೂರ್ಣ ಮುಳುಗಡೆಯಾಗಿದ್ದು ಅವುಗಳ ಹೊಲಗಳು ಭಾಗಶಃ ಮುಳುಗಡೆಯಾಗಿರುತ್ತವೆ. ಆರು ಹಳ್ಳಿಗಳ ಹೊಲಗಳು ಭಾಗಶಃ ಮಾತ್ರ ಮುಳುಗಡೆಯಾಗಿರುತ್ತವೆ. ಮುಳುಗಡೆಯಾದ ಹಳ್ಳಿಗಳ ಜನರ ಅಭಿಪ್ರಾಯವನ್ನು ಪರಿಗಣಿಸಿ ಪುನರ್‌ವಸತಿ ಕೇಂದ್ರಗಳನ್ನು ವಿವಿಧ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ. ಒಟ್ಟು 31 ಪುನರ್ ವಸತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನಿರಾಶ್ರಿತರಾದ ಕುಟುಂಬಗಳಿಗೆ (1) 50 ಅಡಿ * 100 ಅಡಿ (2) 40 ಅಡಿ * 80 ಅಡಿ (3) 30 ಅಡಿ * 60 ಅಡಿ ನಿವೇಶನಗಳನ್ನು ನೀಡಲಾಗಿದೆ. (at free of cost) ಮುಳುಗಡೆಯಾದ ಮನೆಗಳು ಹಾಗೂ ಹೊಲಗಳಿಗೆ ಪರಿಹಾರವನ್ನು 2 ಸಹಕಾರ ಸಂಘಗಳ ಮೂಲಕ ನೀಡಲಾಗಿದೆ. ಬಾದಿತವಾದ ಕುಟುಂಬಗಳ ಪುನರ್‌ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಲು ಸರ್ಕಾರದಿಂದ ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ಪುನರ್‌ವಸತಿ ಕೇಂದ್ರಗಳಲ್ಲಿ ರಸ್ತೆಗಳು ಮತ್ತು ಅಪ್ರೋಚ್ ರಸ್ತೆಗಳನ್ನು ನಿರ್ಮಿಸಲಾಗಿದೆ. 31 ಪುನರ್ ವಸತಿ ಕೇಂದ್ರಗಳಲ್ಲಿ 51ಭಾವಿಗಳ ಮುಖಾಂತರ ಕುಡಿಯುವ ನೀರಿನ

		ಸರಬರಾಜು ವ್ಯವಸ್ಥೆ ಮಾಡಲಾಗಿದೆ. ಎಲ್ಲಾ ಪುನರ್‌ವಸತಿ ಕೇಂದ್ರಗಳಲ್ಲಿ ಶಾಲೆಗಳನ್ನು ನಿರ್ಮಿಸಲಾಗಿದೆ. 17 ಹಳ್ಳಿಗಳಲ್ಲಿ ಪಂಚಾಯತ್ ಹಾಲ್ / ಚಾವಡಿಯನ್ನು ನಿರ್ಮಿಸಲಾಗಿದೆ. ಮುಳುಗಡೆಯಾದ ಧಾರ್ಮಿಕ ಸ್ಥಳಗಳನ್ನು ಪುನರ್‌ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದ್ದು, ಸದರಿ ಹಳ್ಳಿಯಲ್ಲಿ ಹೆಚ್ಚಿನ ನೇಕಾರರು ಇದ್ದುದರಿಂದ ಇದಕ್ಕಾಗಿ ಭಾಗ್ಯನಗರದಲ್ಲಿ ಹೊಸದಾಗಿ ನೇಕಾರರ ಸದರಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಈ ಕೇಂದ್ರದಲ್ಲಿ 200 ಮನೆಗಳನ್ನು ನಿರ್ಮಿಸಲು Bhagyanagar Rural Uplift Co-operative Society ಗೆ ಮುಂಗಡ ಸಾಲವನ್ನು ಸರ್ಕಾರದಿಂದ ನೀಡಿ ವಸತಿ ಹಾಗೂ ಯಾವುದೇ ಆದಾಯ ಮೂಲವಿಲ್ಲದ ನೇಕಾರರಿಗೆ ನೆರವು ನೀಡಲಾಗಿದೆ.